"ನಾನು ಬಾಯಾರಿ ಜಯರಾಂಬಾಟಿಗೆ ಬರುವೆನೆಂದು ಮಾತೆಯವರಿಗೆ ತಿಳಿದಿತ್ತೇನು?" ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಿತು, ನಾನು ಜಯರಾಂಬಾಟಿಗೆ ಹೋಗುವ ವಿಷಯ ಯಾರಲ್ಲೂ ಹೇಳಿರಲಿಲ್ಲ. ಹೇಗಾದರಾಗಲಿ, ಶ್ರೀಮಾತೆ ಜಗಜ್ಜನನಿಯಲ್ಲವೇ, ಎಲ್ಲವನ್ನೂ ತಿಳಿದುಕೊಳ್ಳಲು ಶಕ್ತರು ಎಂದುಕೊಂಡೆ.

ಶ್ರೀಮಾತೆ ನನ್ನ ಕಡೆಗೆ ನೋಡಿ ಹೇಳಿದರು, "ಮಗು, ಎಲ್ಲಿಂದ ಬಂದೆ?"

"ಬಾಂಕುರಾದಿಂದ", ನಾನು ಉತ್ತರಿಸಿದೆ.

ಶ್ರೀಮಾತೆ ಕೇಳಿದರು, "ವಿಭೂತಿ, ವೈಕುಂಠ ಇವರೆಲ್ಲಾ ಚೆನ್ನಾಗಿದ್ದಾರಲ್ಲ?"

ನಾನು ಉತ್ತರಿಸಿದೆ, "ಹೌದಮ್ಮ, ಆದರೆ ಇಂದು ನಾನು ಬರುವ ವಿಷಯ ಅವರುಗಳಿಗೆ ಹೇಳಲಿಲ್ಲ. ಅವರು ಇಲ್ಲಿಗೆ ಹೋಗಲು ನನಗೆ ಅನೇಕ ಸಲ ಹೇಳಿದ್ದರು. ಸ್ವಲ್ಪ ದಿನಗಳಾಯಿತು. ನಾನು ರಾತ್ರಿ ಸ್ವಪ್ನದಲ್ಲಿ ನೋಡಿದೆ: ನಾನು ಜಯರಾಂಬಾಟಿಗೆ ಹೋಗುತ್ತಿದ್ದೇನೆ. ಬಹುದೂರದ ರಸ್ತೆ. ನಡೀತಾ ಇದೀನಿ. ಯಾವುದೋ ಬಯಲಿಗೆ ಬಂದುಬಿಟ್ಟಿದ್ದೇನೆ. ನಂತರ ರಸ್ತೆ ಕಾಣಲಿಲ್ಲ. ಆಗ ನಿದ್ದೆಯಿಂದ ಎಚ್ಚರವಾಯಿತು. ಮತ್ತೊಂದು ರಾತ್ರಿ ಇನ್ನೊಂದು ಕನಸು – ನಡೆಯುತ್ತಾ, ನಡೆಯುತ್ತಾ ಜಯಪುರದ ಅರಣ್ಯಕ್ಕೆ ಬಂದು ಅಲ್ಲಿ ಕಾಡಿನ ಮಧ್ಯೆ ಸಿಕ್ಕಿಹಾಕಿಕೊಂಡೆ. ಮುಂದೆ ನೋಡಿದರೆ, ಒಂದು ದೊಡ್ಡ ಕೊಬ್ಬಿದ ಕರಡಿ! ಆಗ ಓಡಲು ಶುರು ಮಾಡಿದೆ. ಓಡುತ್ತಾ, ಓಡುತ್ತಾ ಬಿದ್ದುಬಿಟ್ಟೆ. ಆಗ ನಿದ್ರಾಭಂಗವಾಯಿತು. ಸಾಮಾನ್ಯವಾಗಿ ಈ ತರಹ ಸ್ವಪ್ನಗಳಾಗುತ್ತಿದ್ದುದನ್ನು ನೋಡಿ ಮನಸ್ಸಿಗನ್ನಿಸಿತು, ಬಹುಶಃ ಶ್ರೀಮಾತೆ ನನಗೆ ದರ್ಶನ ಕೊಡಲು ಈ ತರಹ ಸ್ವಪ್ನಗಳನ್ನು ತೋರಿಸುತ್ತಿರಬಹುದು ಎಂದು. ಅದಕ್ಕಾಗಿಯೇ ಯಾರಿಗೂ ಹೇಳದೆ ಬಂದುಬಿಟ್ಟೆ."

ಇದನ್ನೆಲ್ಲಾ ಕೇಳಿ ಶ್ರೀಮಾತೆ ಹೀಗೆ ಹೇಳಿದರು: "ಸರಿಯಾಗಿಯೇ ಮಾಡಿದೆಯಪ್ಪ. ಈ ದಿನ ನನಗೂ ಯಾರೋ ಬರಬಹುದು ಎಂದೆನಿಸುತ್ತಿತ್ತು. ಈಗ ಸಾಯಂಕಾಲ. ಮನೆಗೆ ಹಿಂತಿರುಗಲು ರಾತ್ರಿ ತುಂಬಾ ಹೊತ್ತಾಗಿ ಹೋಗುತ್ತೆ. ಮಗು, ಇಂದು ಇಲ್ಲೇ ಇದ್ದುಬಿಡು." ಶ್ರೀಮಾತೆಯವರ ಮಾತಿನಂತೆ ರಾತ್ರಿ ಜಯರಾಂಬಾಟಿಯಲ್ಲಿಯೇ ಇದ್ದುಬಿಟ್ಟೆ. ಅನಂತರ ಶ್ರೀಮಾತೆ ಎಲ್ಲವನ್ನೂ ವಿಚಾರಿಸಿದರು: "ನಿನ್ನ ಹೆಸರೇನು? ಎಷ್ಟು ಜನ ಅಣ್ಣ ತಮ್ಮಂದಿರು? ಏನು ಮಾಡುತ್ತೀಯೆ? ವೈಕುಂಠ ಡಾಕ್ಟರ್ ಮತ್ತು ವಿಭೂತಿ ಘೋಷ್‌ರ ಮನೆಯಿಂದ ನಿನ್ನ ಮನೆ ಎಷ್ಟು ದೂರ?" ನಾನು ಎಲ್ಲವನ್ನೂ ತಿಳಿಸಿದೆ. ಮಧ್ಯೆ ಮಧ್ಯೆ ಶ್ರೀಮಾತೆ ಹೇಳುತ್ತಿದ್ದರು: **"ಮಗು, ಠಾಕೂರರನ್ನು ಸ್ಮರಿಸು, ಎಲ್ಲಾ ತೊಂದರೆಗಳೂ ದೂರವಾಗುತ್ತವೆ."**

ಇದಾದನಂತರವೂ ಅನೇಕ ಸಲ ಶ್ರೀಮಾತೆಯವರಲ್ಲಿಗೆ ಹೋಗಿಬರುತ್ತಿದ್ದೆ. ಒಂದೊಂದು ಸಲ ಕೊಯಲಾಪಾರಾ, ಇನ್ನೊಂದು ಸಲ ಜಯರಾಂಬಾಟಿ, ಮತ್ತೊಂದು ಸಲ ಸುರೇಶ್ವರ ಸೇನ್‌ರ ವಿಷ್ಣುಪುರದ ಮನೆ – ಅಲ್ಲೆಲ್ಲಾ ಶ್ರೀಮಾತೆಯವರ ದರ್ಶನ ತೆಗೆದುಕೊಳ್ಳುತ್ತಿದ್ದೆ. ಶ್ರೀಮಾತೆಯವರ ದಯೆಯೇ ನಮಗೆ ಆಧಾರ. ನಮಗೆ ಸ್ವಲ್ಪ ಕಷ್ಟವಾದರೂ ಅವರಿಗೆ ಸಹಿಸಲಾಗುತ್ತಿರಲಿಲ್ಲ.

ನಾನು ಯಾವಾಗಲೂ ಸ್ವಲ್ಪ ಅಶಿಸ್ತಿನ ಸ್ವಭಾವದವನು. ಕೂಲಂಕಷವಾಗಿ ವಿಚಾರ ಮಾಡಿ ಕೆಲಸ ಮಾಡುವ ಅಭ್ಯಾಸ ವಿಲ್ಲ. ದೀಕ್ಷೆ ತೆಗೆದುಕೊಳ್ಳುವ ವಿಷಯದಲ್ಲೂ ಹಾಗೆಯೇ ಮಾಡಿಬಿಟ್ಟೆ, ದೀಕ್ಷೆ ಅವಶ್ಯಕವೇ ಎಂದೆನಿಸಿತು. ದೀಕ್ಷೆ ತೆಗೆದುಕೊಳ್ಳುವ ಬುದ್ಧಿ ಆಗ ಬರಲಿಲ್ಲ. ಆ ವರ್ಷ ದುರ್ಗಾಪೂಜೆಯ ಸಮಯದಲ್ಲಿ ವೈಕುಂಠ ಡಾಕ್ಟರ್ ಜಯರಾಂಬಾಟಿಗೆ ಹೋಗುವುದಾಗಿ ತಿಳಿಸಿದರು. "ನೀನೂ ಬರುತ್ತೀಯಾ?" ಎಂದು ನನ್ನನ್ನು ಕೇಳಿದರು. ಅವರು ನವರಾತ್ರಿಯ ಸಪ್ತಮಿಯಂದು ಹೋಗುತ್ತಿದ್ದರು. ಈ ವಿಷಯ ಕೇಳಿದ್ದೇ ತಡ, ಹೋಗಲು ಒಪ್ಪಿದೆ. ಪೂಜೆಯ ಸಮಯದಲ್ಲಿ ಜಯರಾಂಬಾಟಿಯಲ್ಲಿ ಹಾಜರಾದೆ.

ದುರ್ಗಾಷ್ಟಮಿಯಂದು ಶ್ರೀಮಾತೆಯವರು ಮಂತ್ರದೀಕ್ಷೆ ಕೊಡುವರೆಂದು ಅಲ್ಲಿ ಕೇಳಿತಿಳಿದೆ. ಅದಕ್ಕಾಗಿ ಅನೇಕ ಭಕ್ತರು ಬಂದಿದ್ದರು. ಅವರಲ್ಲಿ ಹಲವರು ಮಂತ್ರದೀಕ್ಷೆಗೋಸ್ಕರ ಸಿದ್ಧರಾಗುತ್ತಿದ್ದರು. ದುರ್ಗಾಪೂಜೆ ನಡೆಯುತ್ತಿದೆ. ಪುಷ್ಪಾಂಜಲಿ ಕೊಡಲು ನಾನು ಉಪವಾಸವಿದ್ದೆ. ನನ್ನ ಮನಸ್ಸಿನಲ್ಲಿ, ನಾನೂ ದೀಕ್ಷೆ ತೆಗೆದುಕೊಳ್ಳಬಹುದೇ ಎಂಬ ವಿಚಾರ ಬರುತ್ತಿತ್ತು. ಮತ್ತೆ ಅಂದುಕೊಂಡೆ: "ಇಲ್ಲ, ಇಲ್ಲ. ಮಾತೆಯವರು ತಾವಾಗಿಯೇ ಏನಾದರೂ ದೀಕ್ಷೆಯ ವಿಷಯ ಹೇಳಿದರೆ ಸರಿ, ದೀಕ್ಷೆ ತೆಗೆದುಕೊಳ್ಳುತ್ತೇನೆ; ಇಲ್ಲದಿದ್ದರೆ ಇಲ್ಲ." ನಾನು ಪೂಜೆಗೆ ಸಂಬಂಧಿಸಿದ ಬೇರೆ ಬೇರೆ ಕೆಲಸಗಳಲ್ಲಿ ಮಗ್ನನಾಗಿದ್ದೆ. ಆಗ ಸಮಯ ಬೆಳಗ್ಗೆ ಒಂಬತ್ತೂವರೆ ಅಥವಾ ಹತ್ತು ಗಂಟೆ ಇರಬೇಕು. ಶ್ರೀಮಾತೆ ನನ್ನನ್ನು ಕರೆದು ಹೇಳಿದರು, "ಮಗು ಆಶು, ನೀನು ಬೇಗ ಸ್ನಾನ ಮಾಡಿಕೊಂಡು ಬಾ."

ಶ್ರೀಮಾತೆಯವರ ಮಾತು ಕೇಳಿ ನನ್ನ ಕಣ್ಣಲ್ಲಿ ನೀರು ಬಂತು. ನಾನು ಬೇಗ ಕೊಳದಲ್ಲಿ ಮುಳುಗಿ ಬಂದೆ. ಶ್ರೀಮಾತೆಯವರೇ ಎಲ್ಲ ವ್ಯವಸ್ಥೆಯನ್ನೂ ಮಾಡಿಬಿಟ್ಟಿದ್ದರು. ಶ್ರೀಮಾತೆಯವರ ಕೃಪೆಯಿಂದಲೇ ಆ ಶುಭ ದುರ್ಗಾಷ್ಟಮಿಯಂದು ನನ್ನ ಮಂತ್ರದೀಕ್ಷೆಯಾಯಿತು.

ಇದಾದ ಕೆಲವು ವರ್ಷಗಳ ನಂತರ ಡಾಕ್ಟರ್ ಮಹಾರಾಜ್ ಸಂನ್ಯಾಸ ತೆಗೆದುಕೊಂಡರು. ನನಗೆ ಇನ್ನೂ ಸಂನ್ಯಾಸ ತೆಗೆದುಕೊಳ್ಳಲಾಗಿರಲಿಲ್ಲ. ಮನೆಬಿಟ್ಟು ನಾನು, ಡಾಕ್ಟರ್ ಮಹಾರಾಜ್, ಕಮಲ್ ಮಹಾರಾಜ್ ಎಲ್ಲರೂ ಠಾಕೂರ್, ಶ್ರೀಮಾತೆ, ಸ್ವಾಮೀಜಿಯವರ ಆದರ್ಶಗಳನ್ನು ಪಾಲಿಸುತ್ತಿದ್ದೇವೆ (ಅವರುಗಳು ಬಾಂಕುರಾ ಆಶ್ರಮದಲ್ಲಿದ್ದರು). ಹಠಾತ್ತಾಗಿ ಇದ್ದಕ್ಕಿದ್ದಂತೆ ನನ್ನ ಮನಸ್ಸಿಗೆ ಬಂತು: ಶ್ರೀಮಾತೆಯೇ ಎಲ್ಲವೂ ಆಗಿದ್ದಾರೆ. ಅವರ ಕೈಲಿ ಸಂನ್ಯಾಸ ತೆಗೆದುಕೊಂಡರೆ ತಪ್ಪೇನು? ಮನಸ್ಸಿನಲ್ಲಿ ಈ ವಿಚಾರ ಬಂದಿದ್ದೇ ತಡ, ಮರುದಿನ ಜಯರಾಂಬಾಟಿಗೆ ಪ್ರಯಾಣ ಮಾಡಿದೆ. ಅಲ್ಲಿಗೆ ಸಾಯಂಕಾಲ ಹೋಗಿ ಸೇರಿದೆ. ಶ್ರೀಮಾತೆಯವರಿಗೆ ಪ್ರಣಾಮ ಮಾಡುತ್ತಿದ್ದ ಹಾಗೆಯೇ ಕೇಳಿದೆ: "ಅಮ್ಮಾ, ನನಗೆ ಸಂನ್ಯಾಸ ಕೊಡಿ." ಶ್ರೀಮಾತೆ ಹೇಳಿದರು, "ನಾನು ಸಂನ್ಯಾಸ ಕೊಡುವುದಿಲ್ಲ. ಮಠಕ್ಕೆ ಹೋಗಿ ನೀನು ರಾಖಾಲ್ (ಸ್ವಾಮಿ ಬ್ರಹ್ಮಾನಂದಜಿ) ಹತ್ತಿರ ಸಂನ್ಯಾಸ

ತೆಗೆದುಕೋ." ನಾನು ಹಟ ಹಿಡಿದು ಹೇಳಿದೆ, "ಅಮ್ಮ, ನೀವೇ ನನಗೆ ಸಂನ್ಯಾಸ ಕೊಡಿ."

ಮಠದಲ್ಲಿ ಸಂನ್ಯಾಸ ತೆಗೆದುಕೊಳ್ಳಲು ಶ್ರೀಮಾತೆ ಎಷ್ಟೋ ಬಾರಿ ಒತ್ತಾಯಿಸಿ ಹೇಳಿದರು. ನನ್ನ ಹಠವೂ ಅಷ್ಟೇ ಹೆಚ್ಚಾಯಿತು. ನನ್ನ ಕತ್ತಿನಲ್ಲಿದ್ದ ಯಜ್ಞೋಪವೀತವನ್ನು ತುಂಡು ತುಂಡು ಮಾಡಿ ಶ್ರೀಮಾತೆಯ ಮುಂದಿಟ್ಟು ಹೇಳಿದೆ, "ನನ್ನ ಧರ್ಮ–ಕರ್ಮ ಎಲ್ಲ ಹೋಗಲಿ. ಕೊಟ್ಟರೆ ಸಂನ್ಯಾಸ ಕೊಡಿ, ಇಲ್ಲದಿದ್ದರೆ ನನ್ನ ಸರ್ವಸ್ವವೂ ನಾಶವಾಗಲಿ" ಎಂದು.

ಹೀಗೆ ಹೇಳಿ ಶ್ರೀಮಾತೆಯ ಪಾದಗಳಲ್ಲಿ ಬಿದ್ದು ಅಳಲಾರಂಭಿಸಿದೆ. ಶ್ರೀಮಾತೆಯವರು ತಲೆಯ ಮೇಲೆ ಕೈ ಆಡಿಸಿ, "ಹುಚ್ಚು ಹುಡುಗ, ಏಳಪ್ಪ ಮಗೂ" ಎಂದರು. ರಾತ್ರಿ ಕಳೆದ ನಂತರ, ಶ್ರೀಮಾತೆಯೇ ಸ್ವಯಂ ತಾವೇ ಒಂದು ಬಟ್ಟೆಗೆ ಕಾವಿಯನ್ನು ಹಾಕಿ ನನಗೆ ಕೊಟ್ಟರು ಮತ್ತು ಹೇಳಿದರು: "ಬೇಲೂರು ಮಠಕ್ಕೆ ಹೋಗಿ ರಾಖಾಲ್ ಹತ್ತಿರ ಅನುಷ್ಠಾನಪೂರ್ವಕವಾಗಿ ವಿರಜಾ ಹೋಮ ಮಾಡಿಸಿಕೋ."

ಮಾತೆಯವರು ಕೊಟ್ಟ ಕಾಷಾಯ ವಸ್ತ್ರ ಪಡೆದು ಅದನ್ನು ತಲೆಗೆ ಒತ್ತಿಕೊಂಡಾಗ ಮನಸ್ಸಿಗನ್ನಿಸಿತು, ನನ್ನ ಜೀವನ ಸಾರ್ಥಕವಾಯಿತು, ನಾನು ಧನ್ಯನಾದೆ ಎಂದು. ಕೆಲವು ವರ್ಷಗಳ ನಂತರ ೧೯೨೭ ರಲ್ಲಿ, ಶರತ್ ಮಹಾರಾಜ್ (ಸ್ವಾಮಿ ಶಾರದಾನಂದಜಿ) ಅವರಿಂದ ನನಗೆ ವಿಧಿಪೂರ್ವಕ ಸಂನ್ಯಾಸವಾಯಿತು.

(ಆಧಾರ : ಮಾಯೇರ್ ಪದಪ್ರಾಂತೇ; ಭಾಗ ೪, ಪುಟ ೯೬೦–೯೬೪)


**ಸ್ವಾಮಿ ವಿವೇಕಾನಂದರ 150ನೇ ಜಯಂತಿ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ**
**ವಿವೇಕಪ್ರಭ ವಿಶೇಷ ಸಂಚಿಕೆ – ಜನವರಿ 2013**

## 'ವಿವೇಕಾನಂದ ವಿಚಾರಸುಧೆ'

ಸ್ವಾಮಿ ವಿವೇಕಾನಂದರ ಬಗ್ಗೆ ಶ್ರೀ ಕುವೆಂಪು ಹೀಗೆ ಹೇಳುತ್ತಾರೆ: **"ಭಾರತದ ಪುನರುತ್ಥಾನದ ಪ್ರಥಮ ಮುಹೂರ್ತದಲ್ಲಿ ಸ್ವಾಮಿ ವಿವೇಕಾನಂದರ ಪಾಂಚಜನ್ಯಸದೃಶವಾದ ಧೀರ ಮತ್ತು ಶಕ್ತಿಸಂಚಾರಕ ಸಿದ್ಧವಾಣಿ ಏನು ಕೆಲಸ ಮಾಡಿತು ಎಂಬುದನ್ನು ಅಳೆಯಲಾದೀತೆ? ವ್ಯಕ್ತಿ–ವ್ಯಕ್ತಿಗಳಲ್ಲಿ ಮತ್ತು ರಾಷ್ಟ್ರ ಸಮಗ್ರದಲ್ಲಿ ಸುರುಳಿ ಸುತ್ತಿ ಸುಪ್ತವಾಗಿದ್ದ ಕುಂಡಲಿನೀ ಶಕ್ತಿಯನ್ನೇ ಅವರು ಹೇಗೆ ಎಚ್ಚರಿಸಿ ಕಾರ್ಯಶೀಲರನ್ನಾಗಿ ಮಾಡಿದರು ಎಂಬುದನ್ನು ಅರಿಯಬೇಕಾದರೆ, ಅವರ ಜೀವನ ಚರಿತ್ರೆಯ ಮುಂದೆ ಧ್ಯಾನಸ್ಥರಾಗಬೇಕಾಗುತ್ತದೆ; ಅವರ ಕೃತಿಗಳ ಅಧ್ಯಯನವೇ ನಮ್ಮ ತಪಸ್ಸಾಗಬೇಕಾಗುತ್ತದೆ."**

ನಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಬದುಕನ್ನು ಚೇತೋಹಾರಿಯನ್ನಾಗಿ ಮಾಡುವ ಅಗಾಧ ಚೈತನ್ಯಶಕ್ತಿ ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳಲ್ಲಿ ಹುದುಗಿದೆ. ಅದರ ಹಲವಾರು ಆಯಾಮಗಳ ಅದ್ಭುತ ಸೌಂದರ್ಯವನ್ನೂ, ರೋಚಕತೆಯನ್ನೂ 'ವಿವೇಕಪ್ರಭ' ದ ವಿಶೇಷ ಸಂಚಿಕೆ ನಿಮ್ಮ ಮುಂದೆ ಇಡುತ್ತದೆ. ಸುಮಾರು 200ಕ್ಕೂ ಹೆಚ್ಚು ವರ್ಣರಂಜಿತ ಪುಟಗಳ ಈ ಸಂಪುಟವು ರಾಮಕೃಷ್ಣ ಸಂಪ್ರದಾಯಕ್ಕೆ ಸೇರಿದ ಸಂನ್ಯಾಸಿಗಳು ಹಾಗೂ ಮಾತಾಜಿಯವರು ಮತ್ತು ಖ್ಯಾತಿವೆತ್ತ ಸಾಹಿತಿಗಳ ಮೌಲಿಕ ಚಿಂತನಾಪುಷ್ಪಗಳಿಂದ ಪರಿಪುಷ್ಟವಾದ ಸುಮಧುರ ಬೌದ್ಧಿಕ ಉದ್ಯಾನವಾಗಿದೆ. ಇದಕ್ಕೆ ಮೆರಗು ನೀಡುವಂತೆ, ಪ್ರಖ್ಯಾತ ಚಿತ್ರಕಾರ ಶ್ರೀ ಚಂದ್ರನಾಥ ಆಚಾರ್ಯ ಅವರ ಅಚ್ಚರಿಗೊಳಿಸುವ ಚಿತ್ರವಿನ್ಯಾಸಗಳಿಂದ ಈ ಸಂಪುಟ ಅಲಂಕೃತವಾಗಿದೆ. ಹಾಗೆಯೇ ಸ್ವಾಮಿ ವಿವೇಕಾನಂದರಿಂದ ಸ್ಫೂರ್ತಿ ಮತ್ತು ಪ್ರೇರಣೆ ಪಡೆದ ಹಲವಾರು ಗಣ್ಯರ, ಓದುಗರ ಸ್ವಂತ ಅನುಭವಗಳು, ಆರಾಧನಾ ನುಡಿಗಳು ಇಲ್ಲಿ ದಾಖಲಾಗಿವೆ.

**ಸ್ವಾಮಿ ವಿವೇಕಾನಂದರ 150ನೇ ಜಯಂತಿ ಪ್ರಯುಕ್ತ ಪ್ರಕಟವಾಗುತ್ತಿರುವ ಈ ಅಮೂಲ್ಯ ಸಂಪುಟವನ್ನು ನಮ್ಮ ಚಂದಾದಾರರಿಗೆ ಉಚಿತವಾಗಿಯೇ ಕಳುಹಿಸಿಕೊಡಲಾಗುವುದು. 10ಕ್ಕಿಂತ ಹೆಚ್ಚಿನ ಪ್ರತಿಗಳನ್ನು ಪಡೆದುಕೊಳ್ಳುವವರಿಗೆ ಶೇ. 15 ರಿಯಾಯತಿ ನೀಡಲಾಗುವುದು. ಬೆಲೆ : ರೂ. 75/–**

**ಹೆಚ್ಚಿನ ಪ್ರತಿಗಳನ್ನು ಕಾದಿರಿಸಲು ಇಂದೇ ಸಂಪರ್ಕಿಸಿ :**
'ವಿವೇಕಪ್ರಭ ವಿಭಾಗ', ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು – 570 020
E-mail: vivekaprabha@hotmail.com; kannada.vivekaprabha@gmail.com
ಫೋನ್ : 9481533505

# ಮಹಾಸಂತ ಪವಾಹಾರಿ ಬಾಬಾ

ಬ್ರ. ಸುವಿಮಲಚೈತನ್ಯ

(*ಹಿಂದಿನ ಸಂಚಿಕೆಯಿಂದ ಮುಂದುವರೆದುದು*)

ಒಮ್ಮೆ ವಾರಾಣಸಿಗೆ ಪವಾಹಾರಿ ಬಾಬಾ ತೆರಳಿದರು. ನಿರಂಜನ ಸ್ವಾಮಿ ಎಂಬ ಅದ್ವೈತ ಸಂಪ್ರದಾಯಕ್ಕೆ ಸೇರಿದ ಸಂನ್ಯಾಸಿಯ ಬಳಿ ಅದ್ವೈತ ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡಿದರು. ಗಾಜೀಪುರದ ಬಳಿ ಗುಹೆಯೊಂದರಲ್ಲಿದ್ದ ಯೋಗಿಯ ಬಳಿ ಇನ್ನೂ ಕೆಲವು ಯೋಗ ಸಾಧನೆಗಳನ್ನು ಕಲಿತು ಬಂದರು. ಸಾಧನೆಗೆಂದು ಆಶ್ರಮದಲ್ಲಿ ದೊಡ್ಡ ಬಿಲವನ್ನು ತೋಡಿ, ಯೋಗಾಭ್ಯಾಸದ ಸಾಧನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.



ಗಾಜಿಪುರದಲ್ಲಿರುವ ಪವಾಹಾರಿ ಬಾಬಾ ಆಶ್ರಮ

ಗಿರ್‌ನಾರ್ ಬೆಟ್ಟದಲ್ಲಿದ್ದ ಯೋಗಿಯನ್ನು ಕಂಡು ಅವರಿಂದ ದೀಕ್ಷೆ ಪಡೆಯಬೇಕೆಂಬ ಹಂಬಲ ಪವಾಹಾರಿ ಬಾಬಾರಲ್ಲಿ ಮತ್ತೊಮ್ಮೆ ಉಂಟಾಯಿತು. ದುರದೃಷ್ಟವಶಾತ್ ಅಯೋಧ್ಯೆಯನ್ನು ತಲುಪುವ ವೇಳೆಗೆ, 'ಆ ಯೋಗಿಯು ದೇಹವನ್ನು ತ್ಯಜಿಸಿದ್ದಾರೆ' ಎಂಬ ಸುದ್ದಿ ತಿಳಿದುಬಂತು. ಆದ್ದರಿಂದ ಅಯೋಧ್ಯೆಯಲ್ಲಿದ್ದ ವಡಗಲೈ ಸಂಪ್ರದಾಯದ ಶ್ರೀವೈಷ್ಣವ ಸಂತನೊಬ್ಬನಿಂದ ವೈಷ್ಣವ ದೀಕ್ಷೆಯನ್ನು ಪಡೆದು ಆಶ್ರಮಕ್ಕೆ ಮರಳಿದರು ಎಂಬ ಪ್ರತೀತಿ ಇದೆ. ಆಶ್ರಮಕ್ಕೆ ಮರಳಿದ ಕೆಲವೇ ದಿನಗಳಲ್ಲಿ ಇವರ ಸಾಧನೆ ತೀವ್ರವಾಯಿತು. ಹೊರಗೆ ಬಾರದೆ ದಿನಗಟ್ಟಲೆ ಬಿಲದಲ್ಲಿ ತಪಸ್ಸನ್ನು ಆಚರಿಸುತ್ತಿದ್ದರು. ಹಳ್ಳಿಗರ ಪ್ರಾರ್ಥನೆಯ ಮೇರೆಗೆ ಪ್ರತಿ ಏಕಾದಶಿಯಂದು ಹೊರಬರುತ್ತಿದ್ದರು.

ದಿನೇ ದಿನೇ ಇವರ ಕೀರ್ತಿ ಸುತ್ತಮುತ್ತಲಿನ ಹಳ್ಳಿಗಳನ್ನು ವ್ಯಾಪಿಸಿತು. ಇವರನ್ನು ಕಾಣಲು ಹೆಚ್ಚು ಹೆಚ್ಚು ಜನರು ಬರಲು ಪ್ರಾರಂಭಿಸಿದರು. ಭಕ್ತರು ಹಾಲು, ಹಣ್ಣು ಇತ್ಯಾದಿ ಪದಾರ್ಥಗಳನ್ನು ತಂದು ಕೋಣೆಯೊಂದರಲ್ಲಿ ಇಟ್ಟು ಹೋಗುತ್ತಿದ್ದರು. ಬಾಬಾ ಕೆಲವೊಮ್ಮೆ ಮಧ್ಯರಾತ್ರಿಯಲ್ಲಿ ಎಲ್ಲರೂ ಮಲಗಿರುವ ಸಮಯದಲ್ಲಿ, ಆ ಪದಾರ್ಥಗಳನ್ನು ತೆಗೆದುಕೊಂಡು ಬಿಲವನ್ನು ಸೇರುತ್ತಿದ್ದರು. ಜನಸಂದಣಿಯು ಹೆಚ್ಚಾಗುತ್ತಿದ್ದ ಕಾರಣ ಬಾಬಾ ವರ್ಷಕ್ಕೊಮ್ಮೆ ಮಾತ್ರ ಹೊರಗೆ ಬರಲು ಪ್ರಾರಂಭಿಸಿದರು. ಆ ದಿವಸ ದೊಡ್ಡ ಜಾತ್ರೆಯೇ ನಡೆಯುತ್ತಿತ್ತು. ಆಶ್ರಮದ ಮೇಲ್ವಿಚಾರಣೆ ಮತ್ತು ಬಾಬಾ ಅವರ ಸೇವೆಗೆಂದು ಅವರ ಅಣ್ಣ ಗಂಗಾ ತಿವಾರಿ ಆಶ್ರಮಕ್ಕೆ ಬಂದು ನೆಲೆಸಿದರು.

ಬಾಬಾ ಅವರಿಗೆ ಮತ್ತೊಮ್ಮೆ ತೀರ್ಥಯಾತ್ರೆಯನ್ನು ಕೈಗೊಳ್ಳಬೇಕೆಂಬ ಹಂಬಲವು ಮೂಡಿತು. ಈ ಬಾರಿ ಪುರಿಗೆ ಅವರು ತಮ್ಮ ಪ್ರಯಾಣವನ್ನು ಬೆಳೆಸಿದರು. ಮಾರ್ಗಮಧ್ಯದಲ್ಲಿ ಅನಾರೋಗ್ಯದ ಕಾರಣದಿಂದ ಬಾಬಾ ಮುರ್ಷಿದಾಬಾದ್‌ನ ಬಳಿಯ ಹಳ್ಳಿಯೊಂದರಲ್ಲಿ ಕೆಲವು ಕಾಲ ನೆಲೆಸಬೇಕಾಯಿತು. ಹಳ್ಳಿಯ ಜನರು ಅದನ್ನು ತಮ್ಮ ಭಾಗ್ಯವೆಂದೆಣಿಸಿ ಗಂಗಾನದಿಯ ದಂಡೆಯ ಮೇಲೆ ಬಾಬಾ ಅವರಿಗೆ ಗುಡಿಸಲನ್ನು ಕಟ್ಟಿಕೊಟ್ಟರು. ಭಕ್ತನೊಬ್ಬನು ಹಗಲೂ ರಾತ್ರಿ ಬಾಬಾ ಅವರ ಸೇವೆಯನ್ನು ಮಾಡಿದನು. ಬಾಬಾ ಆ ಭಕ್ತನಿಂದ ಬಂಗಾಳಿ ಭಾಷೆಯನ್ನು ಕಲಿತರು. ಯಾತ್ರೆಯನ್ನು ಮುಗಿಸಿ ಬರುವ ಸಮಯಕ್ಕೆ ಬಂಗಾಳಿ ಭಾಷೆಯಲ್ಲಿ ಬರೆದ 'ಶ್ರೀಚೈತನ್ಯ ಚರಿತಾಮೃತ' ಹಾಗೂ ಇನ್ನಿತರ ವೈಷ್ಣವ ಧಾರ್ಮಿಕ ಗ್ರಂಥಗಳನ್ನು ಕೊಂಡುತಂದರು. ಇವರು ತೆಲುಗು ಮತ್ತು ತಮಿಳು ಭಾಷೆಗಳನ್ನೂ ಚೆನ್ನಾಗಿ ಬಲ್ಲವರಾಗಿದ್ದರು. ದಕ್ಷಿಣ ಭಾರತದ ಶ್ರೀವೈಷ್ಣವ ಸಂತರಾದ ಆಳ್ವಾರುಗಳ ಮೂಲಕೃತಿಗಳನ್ನು ಅಧ್ಯಯನ ಮಾಡಿದ್ದರು.

ಆಶ್ಚರ್ಯದ ಸಂಗತಿ ಎಂದರೆ ತೀರ್ಥಯಾತ್ರೆಯನ್ನು ಮುಗಿಸಿ ಬಂದಮೇಲೆ ಬಾಬಾ ಭಕ್ತರಿಗೆ ಸುಲಭವಾಗಿ ದರ್ಶನವನ್ನು ನೀಡುತ್ತಿದ್ದರು. ಇದನ್ನು ತಿಳಿದು ಜನರು ಗುಂಪುಗುಂಪಾಗಿ ಅವರ ಬಳಿ ಬರಲು ಆರಂಭಿಸಿದರು. ಅವರೆಲ್ಲರನ್ನೂ ಬಾಬಾ ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಒಮ್ಮೊಮ್ಮೆ ಭಕ್ತರ ಸಂಶಯಗಳನ್ನು ಬಾಗಿಲಿನ ಹಿಂದೆ ನಿಂತುಕೊಂಡು ನಿವಾರಿಸುತ್ತಿದ್ದರು. ಹಲವಾರು ಸಂಪ್ರದಾಯಗಳಿಗೆ ಸೇರಿದ ಸಾಧು ಮಹಾತ್ಮರು ಇವರ ದರ್ಶನಕ್ಕೆಂದು ಬರುತ್ತಿದ್ದರು. ಆಶ್ರಮವು ಜನಜಂಗುಳಿಯಿಂದ ಸದಾ ಕಿಕ್ಕಿರಿದಿರುತ್ತಿತ್ತು. ಬಾಬಾ ಅವರ ಅಣ್ಣಂದಿರಾದ ಗಂಗಾ ತಿವಾರಿಯು ಆಶ್ರಮಕ್ಕೆ ಬಂದ ಎಲ್ಲ ಅತಿಥಿಗಳ ಭೋಜನ ಮತ್ತಿತರ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನೋಡಿಕೊಳ್ಳುತ್ತಿದ್ದರು. ಆಶ್ರಮಕ್ಕೆ ಭೇಟಿ ನೀಡಿದ ಯಾರೊಬ್ಬರಾಗಲೀ ಹಸಿದ ಹೊಟ್ಟೆಯಿಂದ ಹಿಂದಿರುಗುತ್ತಿರಲಿಲ್ಲ.

ಹಲವಾರು ಬಾರಿ ಗಂಗಾನದಿಯು ತಾನು ಹರಿಯುವ ದಿಕ್ಕನ್ನು ಬದಲಿಸುತ್ತದೆ. ಬಾಬಾ ಆಶ್ರಮದ ಸಮೀಪದಲ್ಲಿದ್ದ ಗಂಗಾ ನದಿ ಪೂರ್ವ ದಿಕ್ಕಿನತ್ತ ತುಸು ಮುಂದೆ ಸರಿಯಿತು. ಇದರಿಂದ ಆಶ್ರಮದ ಮುಂದೆ ಇದ್ದ ಭೂಮಿಯ ಭಾಗ ಹೆಚ್ಚಾಯಿತು. ಸರ್ಕಾರ ಈ ಜಾಗವನ್ನು ಆಶ್ರಮಕ್ಕೆ ಉಚಿತವಾಗಿ ಮಂಜೂರು ಮಾಡಿತು. ಗಂಗಾ ತಿವಾರಿಯು ಬಂದ ಅತಿಥಿಗಳಿಗೆ ಪ್ರಸಾದ ವ್ಯವಸ್ಥೆಗೆಂದು ಆ ಜಾಗದಲ್ಲಿ ಭತ್ತದ ನಾಟಿಯನ್ನು ಮಾಡಿದರು. ಇದರಿಂದ ಅತಿಥಿಗಳ ಪ್ರಸಾದ ವ್ಯವಸ್ಥೆಗೆ ಹೆಚ್ಚು ಅನುಕೂಲವಾಯಿತು.